

**ಕಚೇರಿಯಿಂದ** ಮನೆಗೆ ತೆರಳಿದ ಮೇಲೆ ನಾನು ಅನ್ಯಮನಸ್ಕಳಾಗಿ ನನ್ನ ಮನೆಯ ಬಾಗಿಲನ್ನು ತೆರೆದೆ. ಹಿಂದಿನಿಂದ ಬೈಕ್‌ವೊಂದರ ಸದ್ದು ಕೇಳಿಸಿತು. ನಾನು ಹೊರಳಿ ನೋಡಿದೆ. ಅಲ್ಲ, ಅವನು ರಿತಿಕ್ ಆಗಿರಲಿಲ್ಲ. ಅವನು ಬೇರೆಯವನಾಗಿದ್ದ. ಸುಮಾರು ಹದಿನೇಳು ಹದಿನೆಂಟರ ಯುವಕ. ನನ್ನ ಮೇಲೆ ನಾನೇ ರೇಗಿದೆ. ನಾನೇನು ಮಾಡುತ್ತಿದ್ದೇನೆ? ರಿತಿಕ್ ಹೊರಳಿ ಬರುತ್ತಾನೆಂದು ನಾನೇಕೆ ಯೋಚಿಸುತ್ತಿದ್ದೇನೆ? ಅದೂ ಈ ಕೆಟ್ಟ ವಾತಾವರಣದಲ್ಲಿ? ಮೃದುಲನ ಬಗ್ಗೆ ನಾನೆಂದೂ ಹೀಗೆ ಯೋಚಿಸಿರಲಿಲ್ಲ.

ಅಂದು ರಿತಿಕ್ ಹೊರಳಿ ಬರಲಿಲ್ಲ. ರಿತಿಕ್ ನನ್ನ ಬಗ್ಗೆ ಬೇರೆಯಾಗಿಯೇ ಯೋಚಿಸಿದ್ದ. ನಾನು ಬಹುಶಃ ಫಿಲ್ಮ್ ರೊಮಾನ್ಸ್‌ನಂತೆ ಘಟಿಸುವುದನ್ನು ಬಯಸುತ್ತಿದ್ದೆ. ಆದರೆ ಅವನಿಗೆ ಬಹುಶಃ, ಇಂಥ ರೊಮಾನ್ಸ್ ಹೆಚ್ಚು ದಿನಗಳವರೆಗೆ ನಡೆಯುವುದಿಲ್ಲ ಎಂಬುದು ತಿಳಿದಿತ್ತು. ಅಂದು ರಿತಿಕ್ ನಿಲ್ಲಲಿಲ್ಲ, ಮರಳಿ ಸಹ ಬರಲಿಲ್ಲ.

ನಾನು ವಾಶ್‌ರೂಮಿಗೆ ಹೋಗಿ ನನ್ನ ಒದ್ದೆ ಬಟ್ಟೆಗಳನ್ನು ಕಳಚಿದೆ. 'ಚಿನಡಿ' ಸುಲಭವಾಗಿ ಕಳಚಿತು, ಆದರೆ ಕುರ್ತಾ ಒದ್ದೆಯಾಗಿ ಶರೀರಕ್ಕೆ ಅಂಟಿಕೊಂಡಿತ್ತು, ಅದನ್ನು ಕಳಚಲು ಹೆಚ್ಚು ಶ್ರಮ ಪಡಬೇಕಾಯಿತು. ಕುರ್ತಾವನ್ನು ಭೇದಿಸಿದ ಮಳೆಯ ಹನಿಗಳು ನನ್ನ ಒಳ ಉಡುಪನ್ನು ಸಹ ನೆನೆಸಿತ್ತು. ನಾನು ಗೋಡೆಗೆ ಹಾಕಿದ್ದ ಕನ್ನಡಿಯಲ್ಲಿ ನೆನೆದ ಒಳ ಉಡುಪನ್ನು ನೋಡಿಕೊಂಡೆ. ಖಂಡಿತ ಇದು ನನ್ನ ಭ್ರಮೆಯಾಗಿತ್ತು, ಆದರೆ ಅದರಿಂದ ಬಾಷ್ಪ ಸೂಸುತ್ತಿದೆ ಎಂದು ಅನ್ನಿಸಿತು. ನನ್ನ ದೇಹ ಬಿಸಿಯಾಗಿತ್ತು. ಆದರೆ ಜ್ವರದಿಂದಲ್ಲ! ನಾನು ನನ್ನ ಒಳ ಉಡುಪನ್ನು ಸಹ ನನ್ನ ದೇಹದಿಂದ ಬೇರ್ಪಡಿಸಿದೆ. ನನ್ನ ಶರೀರವನ್ನು ನೋಡಿದೆ, ಹೆಣ್ತನ ನನ್ನ ಮೇಲೆ ವಿಶೇಷ ಕೃಪೆಯನ್ನು ಕರುಣಿಸಿತ್ತು. ನನ್ನ ದೇಹ ಯಾವುದೇ ಪುರುಷನನ್ನು ಆಕರ್ಷಿಸುವಂತಿತ್ತು.

ಓಹ್! ನಾನು ಏನು ಯೋಚಿಸುತ್ತಿದ್ದೇನೆ? ನನ್ನ ಯೋಚನೆಗಳಿಗೆ ನಾನೇ ಸಂಕೋಚಪಟ್ಟುಕೊಂಡೆ. ನಾನು ಕೂಡಲೇ ಟವಲ್ ಎಳೆದುಕೊಂಡು, ನನ್ನ ಶರೀರವನ್ನು ಒರೆಸಿಕೊಂಡೆ. ಇದರೊಂದಿಗೆ, ನನ್ನ ಮನಸ್ಸಿನಿಂದ ರಿತಿಕ್ ದೂರವಾಗಲೆಂದು ಪ್ರಯತ್ನಿಸಿದೆ. ಶರೀರವನ್ನು ಚೆನ್ನಾಗಿ ಒರೆಸಿಕೊಂಡು ಬೇರೊಂದು ಸಲ್ವಾರ್ ಸೂಟ್ ಧರಿಸಿದೆ. ನಂತರ ಬಿಸಿ ಕಾಫಿ ಮಾಡಲು ಅಡುಗೆ ಮನೆಗೆ ಹೋದೆ. ನನ್ನ ಅಡುಗೆ ಮನೆ ಚಿಕ್ಕದಾಗಿದೆ. ನನ್ನ ಮನೆಯಲ್ಲಿ ಎರಡು ಕೋಣೆಗಳು, ಒಂದು ಲೆಟ್‌ಬಾತ್ ಮತ್ತು ಒಂದು ಅಡುಗೆ ಮನೆಯಷ್ಟೇ ಇದೆ. ಒಂಟಿ ವ್ಯಕ್ತಿಗೆ ಇದಕ್ಕಿಂತ ದೊಡ್ಡ ಮನೆಯ ಅವಶ್ಯಕತೆ ಸಹ ಇರುವುದಿಲ್ಲ.

ಬೆಳಿಗ್ಗೆ ಕೆಲಸದವಳಾದ ತಾರಾ ಬರುತ್ತಿದ್ದಳು. ಸುಮಾರು ಒಂಬತ್ತು ಗಂಟೆಗೆ. ಅರ್ಧ ಗಂಟೆಯಲ್ಲಿ ಅಡುಗೆ ಮಾಡಿ, ಕಸ ಗುಡಿಸಿ, ನಂತರ ಬಟ್ಟೆ ಒಣಗಿಸುವ ಕೆಲಸ ಮಾಡಿ ಹೊರಟು ಹೋಗುತ್ತಿದ್ದಳು. ಮೊದಲು ನಾನೇ ಈ ಎಲ್ಲಾ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದೆ. ಕೆಲಸವಾದರೂ ಎಷ್ಟಿತ್ತು! ನಾನಿರುವ ಪರಿಸರದಲ್ಲಿ, ನಮ್ಮ ಮನೆಗೆ ಮಾತ್ರ ಕೆಲಸದವಳು ಬರುತ್ತಿರಲಿಲ್ಲ. ಹೀಗಾಗಿ ಅಲ್ಲಿಯ ಜನ ನನ್ನನ್ನು ವಿಚಿತ್ರವಾಗಿ ನೋಡುತ್ತಿದ್ದರು. ವಿಶೇಷವಾಗಿ ಮಹಿಳೆಯರು ನೋಡುತ್ತಿದ್ದರು. ಆ ವಿಚಿತ್ರ ದೃಷ್ಟಿಗಳಿಂದ ಪಾರಾಗಲು, ವ್ಯರ್ಥ ಖರ್ಚು ಎಂದು ತಿಳಿದೂ ಸಹ ತಾರಾಳನ್ನು ಮನೆಯ ಕೆಲಸ ಮಾಡಲು ನೇಮಿಸಿಕೊಂಡೆ. ನನಗಿಂತ ವಯಸ್ಸಿನಲ್ಲಿ ಹಿರಿಯವಳಾದ ತಾರಾ ನನಗಿಂತ ಹೆಚ್ಚು ತಿಳಿವಳಿಕಸ್ಥೆಯಾಗಿದ್ದಳು. ಅವಳಿಗೆ ಜಗತ್ತಿನ ಜ್ಞಾನ ಹೆಚ್ಚಿತ್ತು. ಆದರೆ ಅವಳು ಈ ಬಗ್ಗೆ ನನ್ನಲ್ಲೆಂದೂ ಯಾವುದೇ ವಿಧದಲ್ಲಿ ಚರ್ಚಿಸಿರಲಿಲ್ಲ. ಹಾಂ, ಕಾಲಾಂತರದಲ್ಲಿ ನನ್ನ ಜೀವನದಲ್ಲಿ ರಿತಿಕ್ ಬಂದ ನಂತರವೂ ಮೆಲುಧ್ವನಿಯಲ್ಲಿಯೇ ಅವಳು ನನಗೆ ತಿಳಿ ಹೇಳಲು ಪ್ರಯತ್ನಿಸಿದ್ದಳು, ಆದರೆ ತುಂಬಾ ಆಗ್ರಹಿಸಲಿಲ್ಲ.

ತಾರಾಳ ವಿವಾಹವನ್ನು ಅವಳ ಹದಿಮೂರನೆಯ ವಯಸ್ಸಿಗೇ ನೆರವೇರಿಸಲಾಗಿತ್ತು. ನಮ್ಮ ದೇಶದಲ್ಲಿ ಬಾಲ್ಯ ವಿವಾಹಗಳು ನಡೆಯುವುದಿಲ್ಲವೆಂದು ಯಾರು ಹೇಳುತ್ತಾರೆ? ತಾರಾ ಮತ್ತು ಅವಳಂಥ ಹೆಂಗಸರು ಬಾಲ್ಯವಿವಾಹಕ್ಕೆ ಜೀವಂತ ಉದಾಹರಣೆಗಳಾಗಿದ್ದಾರೆ. ತಾರಾ ಒಮ್ಮೆ, ಅವಳ ವಿವಾಹವಾದಾಗ ಅವಳು ರಜಸ್ವಲೆ ಸಹ ಆಗಿರದ ವಿಷಯವನ್ನು ನನಗೆ ಹೇಳಿದ್ದಳು. ಅವಳ ಹದಿನಾಲ್ಕನೆಯ ವಯಸ್ಸಿಗೆ ಶೋಭನ ಪ್ರಸ್ತ ನಡೆದಿತ್ತು. ಅದುವರೆಗೆ ಅವಳ 'ಮಾಸಿಕ ಧರ್ಮ' ಆರಂಭವಾಗಿತ್ತು. ಅವಳಿಗೆ ಹೆಣ್ಣುಗಂಡಿನ ದೈಹಿಕ ಸಂಬಂಧಗಳ ಅರಿವೂ ಇರಲಿಲ್ಲ, ಆದರೆ ಆಗಲೇ ಅವಳು ಎರಡು ಮಕ್ಕಳ ತಾಯಿ ಸಹ ಆಗಿದ್ದಳು. ಅವಳ ಗಂಡ ಅವಳಿಗಿಂತ ಐದು ವರ್ಷ ದೊಡ್ಡವನು. ತಾರಾ ನನ್ನನ್ನು ಮೊದಲು ರಿತಿಕ್‌ನ ಬಗ್ಗೆ ಸಕಾರಾತ್ಮಕವಾಗಿ ಎಚ್ಚರಿಸಲು ಪ್ರಯತ್ನಿಸಿದ್ದಳು. ಆ ದಿನಗಳಲ್ಲಿ, ನಾನು ಯಾರ ಸಲಹೆಯ ಬಗ್ಗೆ ಸಹ ಗಮನ ಕೊಡುವ ಸ್ಥಿತಿಯಲ್ಲಿರಲಿಲ್ಲ. ಆ ದಿನಗಳಲ್ಲಿ ನನ್ನ ಜೀವನ ನನ್ನ ಸಂಜ್ಞೆಯಂತೆ ನಡೆಯುತ್ತಿದೆ ಎಂದು ನನಗನ್ನಿಸುತ್ತಿತ್ತು. ನಾನೇನು ಬಯಸುತ್ತಿದ್ದೆನೋ, ಹಾಗೆಯೇ ಸುಮಾರಾಗಿ ಘಟಿಸುತ್ತಿತ್ತು.

ದೇಹದ ಹಸಿವು ನನ್ನನ್ನೆಂದೂ, ಪ್ರೀತಿಯ ದಾಹ ಪ್ರಭಾವಗೊಳಿಸಿದಷ್ಟು ಪ್ರಭಾವಗೊಳಿಸಲಿಲ್ಲ. ಯಾರಾದರೂ ಕೇವಲ ನನ್ನನ್ನು ಮಾತ್ರ ಬಯಸಲಿ ಎಂಬುದು ಸದಾ ನನ್ನಾಸೆಯಾಗಿರುತ್ತಿತ್ತು. ರಿತಿಕ್ ಇದನ್ನೇ ಪ್ರದರ್ಶಿಸುತ್ತಿದ್ದ. ಮರುದಿನ ಬೆಳಿಗ್ಗೆ ನಾನು ಕಚೇರಿಗೆ ಹೋಗಲು ಸಿದ್ಧಳಾಗುತ್ತಿದ್ದೆ. ನಾನು ನನಗೆ ಇಷ್ಟವಾಗಿದ್ದ ಸಲ್ವಾರ್ ಸೂಟ್ ತೆಗೆದೆ. ನಾನು ಇಂದೇಕೆ ಇದನ್ನು ಧರಿಸುತ್ತಿದ್ದೇನೆ? ನನ್ನನ್ನೇ ಪ್ರಶ್ನಿಸಿಕೊಂಡೆ. ನಾನು ಕಳ್ಳತನ ಮಾಡುವಾಗ ಸಿಕ್ಕಿಬಿದ್ದೆ ಎಂದು ಅನ್ನಿಸಿತು. ಸೂಟನ್ನು ಮರಳಿ ಅಲ್ಮಾರಿನಲ್ಲಿ ನೇತು ಹಾಕಿದೆ, ನಂತರ ಸಾಮಾನ್ಯ ಸೂಟ್ ತೆಗೆದೆ.

'ಕೆಲಸಗಳೆಲ್ಲವೂ ಮುಗಿದವು, ನಾನು ಹೋಗ್ತಿದ್ದೇನೆ' ತಾರಾ ಹೇಳಿದಳು. ನಾನು ಗಡಿಯಾರ ನೋಡಿದೆ, ಹತ್ತು ಗಂಟೆಯಾಗಿ ಹದಿನೈದು ನಿಮಿಷಗಳಾಗಿದ್ದವು. ನಂತರ ನಾನು ಹೇಗೆ ಸಿದ್ಧಳಾದೆ, ಹೇಗೆ ಓಡಿ ಹೋಗಿ ಆಟೊ ಹಿಡಿದೆ ಎಂಬ ಪ್ರಜ್ಞೆಯೇ ನನ್ನಲ್ಲಿರಲಿಲ್ಲ. ಓಡುತ್ತಾ ಕಚೇರಿಗೆ ಬಂದೆ. ಹಾಜರಿ ಪುಸ್ತಕ ಹೊರಗೇ ಇತ್ತು. ಅನೇಕ ಬಾರಿ ಹತ್ತೂವರೆಯಾಗುತ್ತಲೇ ಅಧಿಕಾರಿ ಮಹಾಶಯರು ಹಾಜರಿ ಪುಸ್ತಕವನ್ನು ತಮ್ಮ ಕೋಣೆಗೆ ತರಿಸಿಕೊಳ್ಳುತ್ತಿದ್ದರು, ತಡವಾಗಿ ಬರುವ ಸಿಬ್ಬಂದಿಗಳನ್ನು ಬಹಿರಂಗವಾಗಿ ಹಿಡಿಯಬಹುದು ಎಂಬ ಉದ್ದೇಶ ಇದರ ಹಿಂದಿತ್ತು. ಅಂದು ನನ್ನ ಅದೃಷ್ಟ ಚೆನ್ನಾಗಿತ್ತು; ಅದುವರೆಗೆ ಅಧಿಕಾರಿ ಮಹಾಶಯ ಬಂದಿರಲಿಲ್ಲ. ಅವರಿಗೇ ತಡವಾಗಿತ್ತು. ನನ್ನ ಟೇಬಲ್‌ಗೆ ಬಂದು ಫೈಲ್‌ಗಳನ್ನು ತಿರುವಿ ಹಾಕಲಾರಂಭಿಸಿದೆ. 'ದೂರಿನ ಶಾಖೆ'ಯನ್ನು ನಾನು ನೋಡಿಕೊಳ್ಳಬೇಕಿತ್ತು. ನಿತ್ಯ ಎಂಟು ಹತ್ತು ದೂರು ಪತ್ರಗಳು ನನ್ನ ಟೇಬಲ್‌ಗೆ ಬರುತ್ತಿದ್ದವು. ಸಂಬಂಧಿಸಿದ ಶಾಖೆಗಳಿಂದ ಅವುಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಕೂಡಲೇ ಅವುಗಳಿಗೆ ಸಂಬಂಧಿಸಿದ ಉತ್ತರದ ವರದಿಯ ಡ್ರಾಫ್ಟ್ ಸಿದ್ಧಪಡಿಸಿ ಅಧಿಕಾರಿಗಳ ಟೇಬಲ್‌ಗೆ 'ಪುಟಪ್' ಮಾಡುವುದು ನನ್ನ ಕೆಲಸವಾಗಿತ್ತು. ಅಧಿಕಾರಿಗಳು ವರದಿಯ ಡ್ರಾಫ್ಟನ್ನು 'ಓಕೆ' ಮಾಡುತ್ತಲೇ ಅದನ್ನು ಟೈಪ್ ಮಾಡಿ ಅಧಿಕಾರಿಗಳ ರುಜುವಿಗಾಗಿ ಮತ್ತೆ 'ಪುಟಪ್' ಮಾಡಬೇಕಿತ್ತು. ನನಗೆ ವಹಿಸಿದ ಈ ಕೆಲಸವನ್ನು ಗಮನವಿಟ್ಟು ಮಾಡುವ ಉದ್ದೇಶದಿಂದ ಅನೇಕ ಬಾರಿ ನನ್ನ ಸಹೋದ್ಯೋಗಿಗಳ ವ್ಯಂಗ್ಯದ